O.S .No. 130/2013

ಡಿ.ಡಬ್ಲ್ಯೂ-1

ದಿನಾಂಕ: 27.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ವಾದಿ ಪರ ಶ್ರೀ ಸಿ.ಆರ್. ವಕೀಲರಿಂದಃ</u>

ನಾನು ಟ್ರಾವೆಲ್ ಏಜೆನ್ಸಿ ನಡೆಸುತ್ತಿದ್ದೇನೆ. ನಾನು ಬಿ.ಎ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ವಾದಿ ಏನು ಪರಿಹಾರ ಕೋರಿ ದಾವೆ ಹೂಡಿದ್ದಾರೆಂದು ಕೇಳಿ ತಿಳಿದುಕೊಂಡಿದ್ದೀರಿ ಎಂದರೆ ಸರಿ.

ನನ್ನ ತಂದೆ ಹೆಸರು ತಿಮ್ಮಯ್ಯ. ನನ್ನ ತಂದೆ ದಿಃ21.03.2000 ರಂದು ಮೃತಪಟ್ಟಿರುತ್ತಾರೆ. ನಿಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿಲ್ಲ ಎಂದು ಹೇಳುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರ ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿದೆ ಎಂದು ಹೇಳುತ್ತಾರೆ.

ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿ ವಾದ ಪತ್ರದ ವಿಚಾರವನ್ನು ಮಾತ್ರ ಬರೆದಿದ್ದು, ಪ್ರತಿವಾದ ಪತ್ರದ ವಿಚಾರವನ್ನು ನಮೂದಿಸಿಲ್ಲ ಎಂದರೆ ಸಾಕ್ಷಿ ಅಷ್ಟಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ ಆಸ್ತಿ ನಿಮಗೆ ಹೇಗೆ ಬಂತು, ಅದನ್ನು ಯಾರಿಂದ ಖರೀದಿಸಿದ್ದೀರಿ ಮತ್ತು ಅವರಿಗೆ ಆಸ್ತಿ ಹೇಗೆ ಬಂತು ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ಪ್ರತಿವಾದ ಪತ್ರದಲ್ಲಿ ವಾದ ಪತ್ರದಲ್ಲಿರುವ ಅಂಶಗಳನ್ನು ಸುಳ್ಳು ಎಂದು ಮಾತ್ರ ಬರೆಸಿದ್ದನ್ನು ಹೊರತು ಪಡಿಸಿ ಬೇರೆ ವಿಚಾರ ಬರೆಸಿಲ್ಲ ಎಂದರೆ ಸರಿಯಲ್ಲ.

2, 3 ಮತ್ತು 5ನೇ ಪ್ರತಿವಾದಿಗಳ ಪರವಾಗಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ನಿಮಗೆ ಅಧಿಕಾರ ಪತ್ರ ಕೊಟ್ಟಿದ್ದರಾ ಎಂದರೆ ಸಾಕ್ಷಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಯಾವ ದಿನಾಂಕದಂದು ಅಧಿಕಾರ ಪತ್ರವನ್ನು ನಿಮಗೆ ಕೊಡಲಾಯಿತು, ಅದನ್ನು ನೊಂದಣಿ ಮಾಡಿಸಲಾಗಿದೆಯೋ, ಇಲ್ಲವೋ ಎಂದರೆ ಸಾಕ್ಷಿ ದಿನಾಂಕ ಜ್ಞಾಪಕ ಇಲ್ಲ, ಆದರೆ ನೊಂದಾಯಿತವಲ್ಲದ ಪತ್ರ ಎಂದು ಹೇಳುತ್ತಾರೆ. ಸಾಕ್ಷಿಗೆ ನಿಡಿ-1 ರಿಂದ 15 ದಾಖಲಾತಿಗಳನ್ನು ಕೊಟ್ಟು, ಅದರಲ್ಲಿ ಅಧಿಕಾರ ಪತ್ರವನ್ನು ಗುರುತಿಸುವಂತೆ

ಕೇಳಿದ್ದು, ಸಾಕ್ಷಿ ಅದರಲ್ಲಿ ಇಲ್ಲ ಎಂದು ಹೇಳುತ್ತಾರೆ.

**(** ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ**,** ಆಲಿಸಿ ಅನುಮತಿಸಲಾಯಿತು**.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.